ಕಡಿಮೆ ವೆಚ್ಚದ ಕ್ರೀಡಾಕೂಟ ನಡೆಸಲು

1) ಯುವಕ ಮಂಡಲ,ಮರವಂತೆ,ಕುಂದಾಪುರ	ರೂ.1000-00
2) ವೈಭವ ಯುವಕ ಮಂಡಲ, ಬಿದ್ಕಲ್ಕಟ್ಟೆ (ತಾಲ್ಲೂಕುಮಟ್ಟದ ವಾಲಿಬಾಲ್)	ರೂ.1,250-00
3) ಕದಂಬ ಯುವಕ ಮಂಡಲ ಕಂಬದಕೋಣೆ (ತಾಲ್ಲೂಕುಮಟ್ಟದ ವಾರಿಬಾಲ್)	ರೂ.1,250-00
4) ಆದರ್ಶ ಯುವಕ ಮಂಡಲ, ರಾಗಿಹಿತ್ಲು	ರೂ.5,000-00
	ರೂ.5,000-00

(ಸಲಕರಣೆ ಹಾಗೂ ಕ್ರೀಡೋಪಕರಣಗಳನ್ನು ಕೊಳ್ಳಲು)

1) ಮಿತ್ರವೃಂದ ಮುಖ್ಯರಸ್ತೆಗಂಗೊಳ್ಳಿ	ರೂ.1000-00
2) ಕರಾವಳಿ ಯುವಕ ಮಂಡಲ ಬೇಜಾಡಿ	ರೂ.1,000-00
3) ಆಜಾದ್ ಗೆಳೆಯರ ಬಳಗ ನಾಗೂರು	ರೂ.1,000-00
	ರೂ.3,000-00

ಒಳ ಕ್ರೀಡಾಂಗಣ ಮತ್ತು ಬಯಲುರಂಗ ಮಂದಿರ ಕಟ್ಟಲು ಧನಸಹಾಯ(ಯೋಜನೆ ಜಿಲ್ಲಾ ಪರಿಷತ್)

1) ನಂದಿಕೇಶ್ವರ ಯುವಕ ಮಂಡಲ. ಅಸೋಡು	ರೂ.10,000-00
	ರೂ.33,000-00

ಹೊಸಂಗಡಿಯಲ್ಲಿ ಪೋಲೀಸ್ ಠಾಣೆ ತೆಗೆಯುವ ಕುರಿತು.

1329 – ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಕುಂದಾಪುರ),ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ ಹೊಸಂಗಡಿಯಲ್ಲಿ ಪೋಲೀಸ್ ಠಾಣೆ ತೆರೆಯುವ ಸಲಹೆ ಯೋಜನೆ ಏನಾದರೂ ಸರ್ಕಾರದವರ ಮುಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ತೆರೆಯಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :

ಅ) ಹೌದು ಒಂದು ಪ್ರಸ್ತಾವನೆ ಇದೆ.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಕೇಡಿಗಳ ದಾಖಲಾತಿ ಕುರಿತು.

1329 – ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ), ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಕಳೆದ 5 ವರ್ಷಗಳಿಂದ ಕೇಡಿಗಳ ಸಂಖ್ಯೆ ಎಷ್ಟು? (ದಾಖಲಾದವರ ಹೆಸರು,ವಿಳಾಸ ಮತ್ತು ದಿನಾಂಕ ಸಹಿತ ವಿವರ ನೀಡುವುದು)

ಆ) ಯಾವ ಯಾವ ಪ್ರಕರಣಗಳಿಗಾಗಿ ಅವರುಗಳು ಕೇಡಿಗಳೆಂದು ದಾಖಲು ಮಾಡಲಾಗಿದೆ? (ಪ್ರಕರಣ ದಿನಾಂಕ ಸ್ಥಳ ಸಹಿತ ವಿವರ ನೀಡುವುದು)